ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ ೨೫ನೇ ಸೆಪ್ಟಂಬರ್ ೧೯೯೧ ಆಶ್ವಯುಜ ೩, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪೋಲೀಸ್ ವಸತಿ ಗೃಹಗಳ ನಿರ್ವಹಣೆ

1815 -ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಮಾಗಡಿ ರಸ್ತೆ ಪೋಲೀಸ್ ಕ್ವಾರ್ಟರ್ಸ್ ಮತ್ತು ಜಾರಕ ಬಂಡೆ ಕಾವಲ್ ಪೋಲೀಸ್ ಕ್ವಾರ್ಟರ್ಸ್‌ಗಳಿಗೆ ಸಂಬಂಧಪಟ್ಟಂತೆ 1990-91ರ ಸಾಲಿಗೆ ನಿರ್ವಹಣೆಗೆ (ಮೈನ್‌ಟೈನೆನೆನ್ಸ್) ಒದಗಿಸಿದ್ದ ಹಣ ಎಷ್ಟು*

ಆ) *ಈ ಹಣವನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆಯೆ ಹಾಗೂ ಹೆಚ್ಚುವರಿ ಕೆಲಸಗಳಿಗೆ ಎಷ್ಟು ಹಣ ನೀಡಲಾಗಿದೆ.*

ಇ) *೧೯೯೧-೯೨ ಸಾಲಿಗೆ ಸದರಿ ಕ್ವಾರ್ಟರ್ಸ್‌ನ ನಿರ್ವಹಣೆಗಾಗಿ ಹಣವನ್ನು ಮಂಜೂರು ಮಾಡಲಾಗಿದೆ ಹಾಗೂ ಹೆಚ್ಚುವರಿ ಕೆಲಸಗಳಿಗೆ ಎಷ್ಟು ಹಣ ಮೀಸಲಿಡಲಾಗಿದೆ?*

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ಎಲ್ಲಾ ಕಟ್ಟಡಗಳ ನಿರ್ವಹಣೆಗಳನ್ನು ಇಡುಗಂಟಿನ ಅನುದಾನದಲ್ಲಿ ಭರಿಸುತ್ತಿರುವದರಿಂದ 1990-91 ರಲ್ಲಿ ಈ ಕ್ವಾರ್ಟರ್ಸ್‌ಗಳಿಗಾಗಿ ಪ್ರತ್ಯೇಕ ಹಣ ಒದಗಿಸುವ ಪ್ರಶ್ನೆ ಬರುವುದಿಲ್ಲ.

ಆ) ಮೇಲಿನ 'ಅ' ದಲ್ಲಿ ನೀಡಲಾದ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ

ಶ್ರೀ ಕೆ. ಲಕ್ಕಣ್ಣ: ಮಾಗಡಿ ರಸ್ತೆ ಪೋಲೀಸ್ ಕ್ವಾರ್ಟರ್ಸ್ ಮತ್ತು ಜಾರಕ್‌ಬಂಡೆ ಕಾವಲ್ ಪೋಲೀಸ್ ಕ್ವಾರ್ಟರ್ಸ್ ರಿಪೇರಿಗೆ ಅಂದಾಡು ವೆಚ್ಚು ಎಷ್ಟು ಎಂದು ಕೇಳಿದ್ದೆ ಕ್ವಾರ್ಟರ್ಸ್ ರಿಪೇರಿಗೆ ಒಟ್ಟಿಗೆ ರಿಪೇರಿಗೆ ಹಣ ಬಡುಗಡೆ ಮಾಡುತ್ತೇವೆಂದು ಉತ್ತರ ಬಂದಿದೆ ಅವು 30 ವರ್ಷಗಳ ಹಿಂದೆ ಕಟ್ಟಿದ ವಸತಿ ಗೃಹಗಳು ಈಗ ಏನು ರಿಪೇಲಿಗೆಂದು ಹಣ ಕೊಡುತ್ತೀರಿ.

ಅದರಲ್ಲಿ ಸುಣ್ಣ ಕೂಡ ಬಳಿಸುವುದಕ್ಕಾಗುವುದಿಲ್ಲ ಕ್ವಾರ್ಟರ್ಸ್‌ಗಳು ತುಂಬಾ ದುಸ್ಥಿತಿಯಲ್ಲಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಏನು ವೆಚ್ಚ ತಗಲುತ್ತದೆ ಆ ಪ್ರಕಾರ ವಾರ್ಷಿಕ ರಿಪೇರಿಗೆ ಹಣ ಕೊಡುವುದಕ್ಕೆ ಸಾಧ್ಯವೇ? ಹೇಗೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಮಾಗಡಿ ರಸ್ತೆ ಪೋಲೀಸ್ ಕ್ವಾರ್ಟರ್ಸ್‌ಗೆ ಈ ವರ್ಷ ಸುಮಾರು ಒಂದು ಲಕ್ಷದ 61 ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ. ಜಾರ್‌ಕ್‌ಬಂಡೆ ಕಾವಲ್ ಪೊಲೀಸ್ ಕ್ವಾರ್ಟರ್ಸ್‌ಗೆ 1.3 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮಗೆ ಎಷ್ಟು ಅನುದಾನ ಬರುತ್ತದೆ ಅದರ ಮೇಲೆ ಕಟ್ಟಡಗಳ ರಿಪೇರಿಗೆ ಹಣ ಇಡುತ್ತೇವೆ. ನಾವು 70 ರೂಪಾಯಿಗಳನ್ನು ಮೆಯಿಂಟೆನೆನ್ಸ್‌ಗೆ ಎಂದು ಕೇಳಿದ್ದರೆ 40ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಷ್ಟು ಪ್ರಮಾಣದಲ್ಲಿ ಹಣ ಬರುತ್ತದೆ ಅದನ್ನು ಅನುಸರಿಸಿ ಈ ಕ್ವಾರ್ಟರ್ಸ್ ರಿಪೇರಿ ಮಾಡಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಲಕ್ಕಣ್ಣ : ಹಿಂದೆ ಕಟ್ಟಡದ ವೆಚ್ಚದ ಪ್ರಕಾರ ಇಂತಿಷ್ಟು ಭಾಗ ಎಂದು ಕೊಡುತ್ತಿದ್ದರು ಅದು ಈಗಿನ ಬೆಲೆಯಲ್ಲಿ ಅದು ಏನೇನು ಸಾಕಾಗುವುದಿಲ್ಲ ಇದರಿಂದ ಆ ಕ್ವಾರ್ಟರ್ಸ್ ಕೊಳಚೆ ಪ್ರದೇಶಗಳಂತೆ ಕಾಣುತ್ತಿವೆ. ನಿಮಗೆ ರಿಪೇರಿ ಮಾಡಿಸಲು ಸಾಧ್ಯವಿಲ್ಲವೆಂದರೆ ಅವರಿಗೆ ಸ್ವಂತಕ್ಕೆ ಕೊಟ್ಟು ಹಣ ವಸೂಲ್ಮಾಡಿದರೆ ಅವರೇ ಸ್ವತ ರಿಪೇರಿ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಇದು ಸಾಧ್ಯವೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಆ ನೀತಿ ಬಗ್ಗೆ ಸರ್ಕಾರದಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಆದರೆ ಈ ವರ್ಷ ಹೆಚ್ಚಿನ ಅನುದಾನ ಕೊಡಬೇಕು, ರಿಪೇರಿ ಮಾಡಿಸಬೇಕೆಂಬ ಉದ್ದೇಶ ಸರ್ಕಾಕ್ಕಿದೆ. ಆ ಪ್ರಕಾರ ಈ ವರ್ಷ ಒಂದು ಲಕ್ಷದ ೬೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮುಂದಿನ ವರ್ಷ ಅದಕ್ಕೆ ಹೆಚ್ಚಿನ ಅನುದಾನ ನೀಡುವ ಪ್ರಯತ್ನ ಮಾಡಲಾಗುವುದು. ೭೦ ಕೋಟಿ ಕೇಳಿದ್ದರಲ್ಲಿ ಕೇವಲ ೪೦ ಕೋಟಿ ರೂಪಾಯಿಗಳನ್ನು ಮಾತ್ರ ಬಿಲ್ಡಿಂಗ್ ಮೆಯಿಂಟೆನೆನ್ಸ್‌ಗೆಂದು ಕೊಟ್ಟಿದ್ದಾರೆ. ಇದರಿಂದ ತೊಂದರೆಯಾಗಿದೆ ಅದಷ್ಟು ಜಾಗ್ರತೆ ಕ್ವಾರ್ಟರ್ಸ್ ರಿಪೇರಿಗೋಸ್ಕರ ಏನು ಮಾಡಬೇಕು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರಿಗೇ ಸ್ವಂತಕ್ಕೆ ಕೊಡುವುದಕ್ಕೆ ಆಗುವುದಿಲ್ಲ, ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿರೇಕೆರೂರುನಲ್ಲಿ ನ್ಯಾಯಾಲಯ ಕಟ್ಟಡದ ನಿರ್ಮಾಣ ಸ್ಥಗಿತಗೊಂಡಿರುವುದು

1877 - ಬಿ.ಹೆಚ್. ಬನ್ನಿಕೊಡು (ಹಿರೆಕೇರೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮುನಿಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಕಟ್ಟಡದ ನಿರ್ಮಾಣ ಕೆಲಸದ ಗುತ್ತಿಗೆದಾರ ಬಿಟ್ಟು ಹೋಗಿರುವುದರಿಂದ ಕಟ್ಟಡದ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಸದರಿ ಕಟ್ಟಡವನ್ನು ತೀವ್ರಗತಿಯಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸಲು ಹೊಸದಾಗಿ ಗುತ್ತಿಗೆದಾರರನ್ನು ನೇಮಿಲಸಲು ಕ್ರಮ ಕೈಗೊಳ್ಳಲಾಗಿದೆಯೇ

ಇ) ಗುತ್ತಿಗೆದಾರರು ಬಾಲರದೇ ಇದ್ದಲ್ಲಿ ಇಲಾಖೆಯವರೇ ಅಪೂರ್ಣವಾಗಿರುವ ಕಟ್ಟಡದ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಸದರಿ ಕಟ್ಟಡವನ್ನು ಪೂರ್ಣಗೊಳಿಸಲು ಬೇಕಾಗಿರುವ ಅವಧಿಯೆಷ್ಟು

ಶ್ರೀ ಬಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಹೌದು.

ಆ) ಹೌದು ವಹಿಸುವ ಆಧಾರದ ಮೇಲೆ.